# ಸುದ್ದಿ ಸಂಚಯ

❖ ಚೆನ್ನೈನಲ್ಲಿರುವ ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಮ್ ಕೇಂದ್ರದಲ್ಲಿ ಶ್ರೀಮತ್ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರ ಸ್ಮಾರಕ ಕೋಣೆಯನ್ನು ಸೆಪ್ಟೆಂಬರ್ ೨ರಂದು ಉದ್ಘಾಟಿಸಲಾಯಿತು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪೂಜ್ಯ ಶ್ರೀಮತ್ ಸ್ವಾಮಿ ಗೀತಾನಂದಜಿ ಮಹಾರಾಜ್ ಈ ಕೋಣೆಯನ್ನು ತೆರೆದು, ಉದ್ಘಾಟಿಸಿದರು.

❖ ಹೈದರಾಬಾದ್ ಆಶ್ರಮದ ಅಂಗಸಂಸ್ಥೆಯಾದ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯು 'ವಿವೇಕಾನಂದ ದರ್ಶನಮ್' ಎಂಬ ಒಂದು ವಿವೇಕಾನಂದರ ಕುರಿತಾದ ಚಿತ್ರ ಪ್ರದರ್ಶನವನ್ನು ಪ್ರಾರಂಭಿಸಿದೆ. ಸೆಪ್ಟೆಂಬರ್ ೧೧ರಂದು ರಾಮಕೃಷ್ಣ ಸಂಘದ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಇದನ್ನು ಉದ್ಘಾಟಿಸಿದರು.

❖ ಝಾರ್‌ಖಂಡ್ ರಾಜ್ಯದ ದೇವಘರದಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾಪೀಠವು ಕೊಲ್ಕತಾದ Indian Epic Cultural Society —'ಭಾರತೀಯ ಪುರಾಣ ಸಂಸ್ಕೃತಿ ಸಂಸ್ಥೆ' ಯಿಂದ 'ವಿಶ್ವನಾಯಕ ವಿವೇಕಾನಂದ ಪುರಸ್ಕಾರ'ವನ್ನು ಸೆಪ್ಟೆಂಬರ ೧೧ರಂದು ಪಡೆದಿದೆ. ಈ ಪುರಸ್ಕಾರವು ಹತ್ತು ಸಾವಿರ ರೂಪಾಯಿಗಳು, ಪ್ರಶಂಸನ ಪತ್ರ ಹಾಗೂ ಸ್ವಾಮಿ ವಿವೇಕಾನಂದರ ಭಿತ್ತಿಚಿತ್ರವಿರುವ ಪಾರಿತೋಷಕವನ್ನು ಒಳಗೊಂಡಿದೆ. ಇದೇ ದಿನದಂದು "ಶಿಕ್ಷಣದ ಗುರಿ—ವಿಶ್ವಭ್ರಾತೃತ್ವ" ಎಂಬ ವಿಷಯವನ್ನು ಕುರಿತು ವಿಚಾರಗೋಷ್ಠಿಯನ್ನೂ ಏರ್ಪಡಿಸಲಾಗಿತ್ತು.

❖ ಸ್ವಾಮಿ ವಿವೇಕಾನಂದರಿಂದ ೧೮೯೯ರಲ್ಲಿ ಪ್ರಾರಂಭಗೊಂಡ ಬಂಗಾಳಿ ಭಾಷೆಯ 'ಉದ್ಬೋಧನ' ಮಾಸಪತ್ರಿಕೆ ಶತಮಾನವನ್ನು ಈಗಾಗಲೇ ಕಂಡಿದೆ. ಪತ್ರಿಕೆಯ ಕಛೇರಿಯು ಸೆಪ್ಟೆಂಬರ್ ೨೪ರಂದು ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಒಂದು ನೂರು ವರ್ಷದ ಅವಧಿಯಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಎಲ್ಲ ಲೇಖನಗಳನ್ನೊಳಗೊಂಡ ೧೮ ಸಿ.ಡಿ.ಗಳನ್ನು ಬಿಡುಗಡೆ ಮಾಡಲಾಯಿತು. ರಾಮಕೃಷ್ಣ ಮಹಾಸಂಘದ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಇವುಗಳನ್ನು ಬಿಡುಗಡೆ ಮಾಡಿದರು. ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲರೂ, ವರ್ತಮಾನ ಮಾನವಹಕ್ಕು ಆಯೋಗದ ಮುಖ್ಯಸ್ಥರೂ ಆದ ನ್ಯಾಯಮೂರ್ತಿ ಶ್ಯಾಮಲ್‌ಸೇನ್ ಭಾಗವಹಿಸಿದ್ದರು.

❖ ಕೇಂದ್ರ ರಕ್ಷಣಾ ಸಚಿವ ಶ್ರೀ ಪ್ರಣವ್ ಮುಖರ್ಜಿ ಅವರು ಬೃಂದಾವನದಲ್ಲಿರುವ ರಾಮಕೃಷ್ಣ ಮಿಷನ್ ಆಸ್ಪತ್ರೆಯ ಹೊಸ ಶಸ್ತ್ರಚಿಕಿತ್ಸಾ ಥಿಯೇಟರನ್ನು ಸೆಪ್ಟೆಂಬರ್ ೨೮ರಂದು ಉದ್ಘಾಟಿಸಿದರು.

❖ ಬೇಲೂರು ಮಠದ ಬಳಿಯಿರುವ ರಾಮಕೃಷ್ಣ ಮಿಷನ್ ಶಾರದಾಪೀಠದ ವಿದ್ಯಾಮಂದಿರದ ಭೌತಶಾಸ್ತ್ರ ಅಧ್ಯಾಪಕ ಶ್ರೀ ಗೌರಾಂಗ ದಾಸ್ ಚಕ್ರವರ್ತಿ ಅವರಿಗೆ ಕೊಲ್ಕತಾ ವಿಶ್ವವಿದ್ಯಾನಿಲಯವು ೨೦೦೫ರ ಉತ್ತಮ ಅಧ್ಯಾಪಕ ಪುರಸ್ಕಾರವನ್ನು ನೀಡಿದೆ.

❖ ಅಲಹಾಬಾದ್, ಚೆಂಗಲ್‌ಪಟ್ಟು, ಲಕ್ನೌ ಹಾಗೂ ಪೋರ್ ಬಂದರ್ ಶಾಖೆಗಳ ಮೂಲಕ ೧೨೪೫ ರೋಗಿಗಳ ಕಣ್ಣು ತಪಾಸಣೆ, ವೈದ್ಯಕೀಯ ಉಪಚಾರ ಮಾಡಲಾಗಿದ್ದು ೪೫ ಜನರಿಗೆ ಉಚಿತ ಕನ್ನಡಕವನ್ನು ನೀಡಲಾಗಿದೆ. ೧೬೪ ರೋಗಿಗಳಿಗೆ ಉಚಿತವಾಗಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

❖ ಸೆಪ್ಟೆಂಬರ್ ತಿಂಗಳಲ್ಲಿ ಪಶ್ಚಿಮ ಬಂಗಾಳದ ಸುಂದರ್‌ಬನ್ ಪ್ರದೇಶದಲ್ಲಿ ಹಾಗೂ ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಲ್ಲಿ ನೆರೆಹಾವಳಿಯಿಂದ ಪೀಡಿತರಾದ ಸಾವಿರಾರು ಜನರಿಗೆ ರಾಮಕೃಷ್ಣ ಮಿಷನ್ ಪರಿಹಾರ ಒದಗಿಸಿದೆ. ೧೨,೬೮೭ ಕುಟುಂಬಗಳಿಗೆ ಆಹಾರ ಪದಾರ್ಥಗಳು, ವಸ್ತ್ರಗಳು, ಕಂಬಳಿ, ಹೊದಿಕೆ, ಪಾತ್ರೆಗಳು ಹಾಗೂ ಔಷಧೋಪಚಾರಗಳನ್ನು ನೀಡಲಾಗಿದೆ. ✡

## ತಮಿಳುನಾಡಿನಲ್ಲಿ ಸುನಾಮಿ ಸಂತ್ರಸ್ತರಿಗೆ ಪರಿಹಾರ ಕಾರ್ಯ.

**( ವಡಕ್ಕು ಮುದಸಲ್ ವಡೈ ಎನ್ನುವ ಸುನಾಮಿ ಸಂತ್ರಸ್ತ ಗ್ರಾಮದಲ್ಲಿ ಪುನರ್ವಸತಿ ಕಾರ್ಯ.)**



ಸುನಾಮಿಯಿಂದ ಸಂಪೂರ್ಣವಾಗಿ ನಾಶಹೊಂದಿರುವ ದ್ವೀಪದ ದೃಶ್ಯ



ಸಂತ್ರಸ್ತರಿಗೆ ಮನೆಗಳನ್ನು ಕಟ್ಟಿಕೊಡಲು ಭೂಮಿ ಪೂಜೆ



ಹೊಸದಾಗಿ ಕಟ್ಟಿಕೊಟ್ಟಿರುವ ಮನೆಗಳ ದೃಶ್ಯ